# ವೀರಭಕ್ತ ಗಿರೀಶ್ ಚಂದ್ರ ಘೋಷ್

**ಪ್ರವ್ರಾಜಿಕಾ ಪರಮಪ್ರಾಣಾ**

(*ಹಿಂದಿನ ಸಂಚಿಕೆಯಿಂದ* )

**ಇಷ್ಟೊಂದು** ಪ್ರಸಿದ್ಧಿಯನ್ನು ಪಡೆದರೂ ಗಿರೀಶ್ ಘೋಷ್ ತನ್ನ ಇತರ ಸಮಕಾಲೀನ ಸಾಹಿತಿಗಳ ಮಟ್ಟಕ್ಕೆ ಗೌರವವನ್ನು ಏಕೆ ಪಡೆಯಲಿಲ್ಲ ಎಂಬ ವಿಷಯದ ಬಗ್ಗೆ ಆ ಕಾಲದ ಕೆಲವು ಸಾಹಿತ್ಯ ವಿಮರ್ಶಕರೊಂದಿಗೆ, ಆಧುನಿಕ ವಿಮರ್ಶಕರೂ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಗಿರೀಶನ ಸಮಕಾಲೀನರಾದ ಶ್ರೀಶ್ಚಂದ್ರ ಮತಿಲಾಲರ ಅಭಿಪ್ರಾಯದಲ್ಲಿ ಗಿರೀಶ್ ಯೌವನಾವಸ್ಥೆಯಲ್ಲಿ ಸಂಯಮಹೀನ ಬದುಕು ನಡೆಸಿದ್ದೇ ಇದಕ್ಕೆ ಕಾರಣ. ಗಿರೀಶ್ ಚಂದ್ರನ ಸ್ವಭಾವವನ್ನು ಕುರಿತು ಅವರು ಹೀಗೆ ಹೇಳುತ್ತಾರೆ: "ಗಿರೀಶ್ ಏನನ್ನೂ ಬಚ್ಚಿಟ್ಟುಕೊಳ್ಳುವ ಸ್ವಭಾವದವನಲ್ಲ. ಜಗತ್ತಿನ ಬಹುಪಾಲು ಜನರು ತಮ್ಮ ಒಳ್ಳೆಯ ಮುಖವನ್ನಷ್ಟೆ ಹೊರಗೆ ತೋರಿಸುತ್ತಾರೆ. ಗಿರೀಶ್ ಜಗತ್ತನ್ನು ಲೆಕ್ಕಿಸಲಿಲ್ಲ; ಅವನು ಮಾನ, ಸನ್ಮಾನಗಳನ್ನು ಕೂಡ ಧಿಕ್ಕರಿಸಿದನು."

ಗಿರೀಶನ ಸಮಯದಲ್ಲಿ ಸಂಪೂರ್ಣವಾಗಿ ಬ್ರಿಟಿಷರ ಸ್ವಾಮ್ಯದಲ್ಲಿದ್ದ 'ಇಂಗ್ಲಿಷ್‌ಮ್ಯಾನ್' ಪತ್ರಿಕೆ ಹೀಗೆ ಬರೆಯುತ್ತದೆ: "ಆಧುನಿಕ ಬಂಗಾಳಿ ನಾಟಕರಂಗ ಗಿರೀಶ್ ಘೋಷರ ಪ್ರಯತ್ನದಿಂದಲೇ ಉನ್ನತಿಗೆ ಬಂದಿದೆ. ಅವರು ಸಾಮಾನ್ಯ ಜನರಿಗಾಗಿಯೇ ಬರೆಯಲು ಆರಂಭಿಸಿದರು. ಜೊತೆಗೆ ಅವರು ಸುವಿಖ್ಯಾತ ನಟರೂ ಹೌದು. ಬಹಳ ಜನ ಯೂರೋಪಿಯನ್ನರೂ ಅವರ ಅಭಿಮಾನಿಗಳಾಗಿದ್ದಾರೆ. ಇಂಥವರಲ್ಲಿ ಒಬ್ಬರಾದ ಇಂಡಿಯನ್ ಸಿವಿಲ್ ಸರ್ವಿಸಿನ ಮಿ. ಕ್ರೈನ್ ಗಿರೀಶರ ಬಗ್ಗೆ ಹೀಗೆ ಹೇಳುತ್ತಾರೆ: 'ಈ ಜಗತ್ತು ತನ್ನ ಸರ್ವಶ್ರೇಷ್ಠ ವ್ಯಕ್ತಿಗಳನ್ನು ತುಂಬ ಕಡಿಮೆಯೇ ಅರ್ಥಮಾಡಿಕೊಂಡಿದೆ.' "

ಗಿರೀಶನ ಕೈಕೆಳಗೆ ಅಭಿನಯವನ್ನು ಆರಂಭಿಸಿದ ನಟನಟಿಯರ ಖ್ಯಾತಿ ವೃದ್ಧಿಯಾದಂತೆ ನ್ಯಾಶನಲ್ ಥಿಯೇಟರಿನ ಮಾಲೀಕನ ಸಂಪತ್ತೂ ಹೆಚ್ಚಾಯಿತು. ಆದರೆ ನಟನಟಿಯರ ಸಂಬಳ ಮಾತ್ರ ಒಂದು ಪೈಸೆಯೂ ಹೆಚ್ಚಾಗಲಿಲ್ಲ. ಅವರು ಗಿರೀಶನ ಎದುರು ತಮ್ಮ ದುಃಖವನ್ನು ತೋಡಿಕೊಂಡರು. ಗಿರೀಶನ ಮಾತನ್ನು ಮಾಲೀಕನಾದ ಪ್ರತಾಪಚಂದ್ರ ಕೇಳದಿರಲು, ಆತ ಥಿಯೇಟರಿಗೆ ಹೋಗುವುದನ್ನೇ ನಿಲ್ಲಿಸಿದನು. ಅವನೊಂದಿಗೆ ಇನ್ನೂ ಕೆಲವರು ನಟನಟಿಯರು ನ್ಯಾಶನಲ್ ಥಿಯೇಟರಿನಿಂದ ಹೊರಬಂದರು. ಇದಾದ ನಂತರ ಗಿರೀಶ್, ಒಬ್ಬ ಶ್ರೀಮಂತ ಮಾರ್ವಾಡಿ ತರುಣನ ಉತ್ಸಾಹಕ್ಕೆ ಕಟ್ಟುಬಿದ್ದು, ಕೊಲ್ಕತಾದ ಬೀಡನ್ ಸ್ಟ್ರೀಟಿನಲ್ಲಿ ವಿಶಾಲವಾದ ಥಿಯೇಟರನ್ನು ಕಟ್ಟಿ, 'ಸ್ಟಾರ್ ಥಿಯೇಟರ್' ಎಂದು ಅದಕ್ಕೆ ಹೆಸರಿಟ್ಟನು. ಸ್ಟಾರ್ ಥಿಯೇಟರಿನಲ್ಲಿ ಒಂದಾದ ಮೇಲೆ ಒಂದರಂತೆ ಪೌರಾಣಿಕ ನಾಟಕಗಳು ಪ್ರದರ್ಶನಗೊಂಡವು. ನಾಟಕಗಳಿಗೆ ಗಿರೀಶ್ ಬರೆದ ಹಾಡುಗಳು ಹಾಗೂ ಉತ್ಕೃಷ್ಟ ಅಭಿನಯದ ಕಾರಣದಿಂದಾಗಿ, ಸ್ಟಾರ್ ಥಿಯೇಟರ್ ಬಹು ಬೇಗ ಜನಪ್ರಿಯವಾಯಿತು.

ನಾಟಕ ಸಾಮ್ರಾಟ ಗಿರೀಶ್ ಚಂದ್ರ ಘೋಷನಿಗೆ ಗೊತ್ತಾಗದಂತೆ ಹತ್ತಿರದ ದಕ್ಷಿಣೇಶ್ವರ ಗ್ರಾಮದಲ್ಲಿ ನಡೆಯುತ್ತಿತ್ತು, ಒಂದು ದಿವ್ಯಲೀಲಾ ನಾಟಕ. ಶ್ರೀರಾಮಕೃಷ್ಣ ಪರಮಹಂಸರು ಇದರ ಕೇಂದ್ರಬಿಂದು. ಅವರು ಯಾವಾಗಲೂ ಭಗವದ್ಭಾವದಲ್ಲಿ ಇರುವವರು. ಸೃಷ್ಟಿಯ ಎಲ್ಲಾ ವಸ್ತುಗಳೂ ಅವರ ದಿವ್ಯಚಕ್ಷುವಿಗೆ ಸಮಾನವಾಗಿ ಗೋಚರಿಸುತ್ತಿದ್ದವು. ಸಕಲ ಸಂಪ್ರದಾಯಗಳ, ಸಕಲ ಭಾವಗಳ ಜನರು ಶ್ರೀರಾಮಕೃಷ್ಣರ ಪವಿತ್ರ ಸಂಸ್ಪರ್ಶದಲ್ಲಿ ಧನ್ಯರಾಗಲು ದಕ್ಷಿಣೇಶ್ವರಕ್ಕೆ ಧಾವಿಸುತ್ತಿದ್ದರು. .

೧೮೮೪ ರ ಸೆಪ್ಟಂಬರ್ ೨೧ ನೇ ತಾರೀಖು, ರವಿವಾರ. ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಅನೇಕ ಭಕ್ತರು ಸೇರಿದ್ದಾರೆ. ಭಗವತ್ ಪ್ರಸಂಗ ನಡೆಯುತ್ತಿದೆ. ಮಾತುಕತೆಗಳ ನಡುವೆ ಶ್ರೀರಾಮಕೃಷ್ಣರು ಆ ಸಂಜೆ, ಸ್ಟಾರ್ ಥಿಯೇಟರ್‌ನಲ್ಲಿ ನಡೆಯುತ್ತಿರುವ **ಚೈತನ್ಯಲೀಲಾ** ನಾಟಕವನ್ನು ನೋಡಲು ಹೋಗುತ್ತಿರುವ ವಿಚಾರ ಎದ್ದಿತು. ಚೈತನ್ಯದೇವ ಹಾಗೂ ನಿತ್ಯಾನಂದರ ಪಾತ್ರಗಳನ್ನು ವೇಶ್ಯೆಯರು ಮಾಡಿದ್ದಾರೆ ಎಂದು ಭಕ್ತರಲ್ಲೊಬ್ಬ ಶ್ರೀರಾಮಕೃಷ್ಣರಿಗೆ ತಿಳಿಸಿದ. ಇದರಿಂದ ಶ್ರೀರಾಮಕೃಷ್ಣರ ಉತ್ಸಾಹ ಒಂದಿನಿತೂ ಕುಗ್ಗಲಿಲ್ಲ. ಅವರು ಕೂಡಲೇ ಅಲ್ಲಿ ನೆರೆದವರ ಎದುರಿಗೆ ಹೇಳಿದರು, "ನಾನು ಅವರನ್ನು ಆನಂದಮಯಿಯರಾದ ಜಗನ್ಮಾತೆಯೆಂದೇ ಕಾಣುತ್ತೇನೆ....."

೧೮೮೪ ರ ಆಗಸ್ಟ್ ೨ ನೆ ತಾರೀಖಿನಿಂದ ಸ್ಟಾರ್ ಥಿಯೇಟರಿನಲ್ಲಿ **ಚೈತನ್ಯಲೀಲಾ** ನಾಟಕ ಆರಂಭವಾಗಿತ್ತು. ಈ ನಾಟಕ ಕೊಲ್ಕತಾ ಮಹಾನಗರದಲ್ಲಿ ಯಾವ ರೀತಿಯ ಕೋಲಾಹಲವನ್ನು ಎಬ್ಬಿಸಿತೆಂದು ಆಗಿನ ಕಾಲದ ಪತ್ರಿಕೆಗಳ ಹಾಗೂ ಅನೇಕ ಕಲಾವಿದರ ಲೇಖನಗಳ ಮೂಲಕ ತಿಳಿದು ಬರುತ್ತದೆ. ಶ್ರೀಮಹೇಂದ್ರನಾಥ ದತ್ತ (ಸ್ವಾಮಿ ವಿವೇಕಾನಂದರ ಸಹೋದರ) ತಮ್ಮ ಕೃತಿಯೊಂದರಲ್ಲಿ ಈ ಬಗ್ಗೆ ಹೀಗೆ ಬರೆದಿದ್ದಾರೆ: "......ಈ ನಾಟಕ ಊರಿನಲ್ಲೊಂದು ಆಂದೋಲನವನ್ನುಂಟುಮಾಡಿತು. ನಾಟಕಗಳ ಹಾಗೂ ನಟರ ವಿಚಾರವಾಗಿ ಜನರ ಮನೋಭಾವದಲ್ಲಿಯೂ ಬದಲಾವಣೆಯನ್ನು ತಂದಿತು. ಪ್ರಸಿದ್ಧರಾದ ವೈಷ್ಣವ ಪಂಡಿತರು ಕೂಡ ದೂರದೂರದಿಂದ ಈ ನಾಟಕ ನೋಡಲು ಬರತೊಡಗಿದರು......" (*ಸ್ವಾಮಿಜೀರ್ ಜೀವನೇರ್ ಘಟನಾವಳಿ* – ಭಾಗ ೧, ಪು. ೮೧).

ಸುಮಾರು ೪೦೦ ವರ್ಷಗಳ ಹಿಂದೆ ಅವತರಿಸಿದ ಶ್ರೀಚೈತನ್ಯದೇವನು ಸಾಧಾರಣ ಮನುಷ್ಯರ ನಡುವೆ, ಭಗವಂತನಲ್ಲಿ ಪ್ರೇಮಭಕ್ತಿ ಮತ್ತು ಸರ್ವಸಮತ್ವ ಭಾವನೆಗಳ ಪ್ರಚಾರ ಮಾಡಿದನು. ಚೈತನ್ಯದೇವನ ತ್ಯಾಗ, ವೈರಾಗ್ಯ ಮತ್ತು ಭಗವತ್ ಪ್ರೇಮಗಳಿಂದ ಆಕರ್ಷಿತರಾಗಿ, ಅವನ ಹರಿನಾಮ ಸಂಕೀರ್ತನೆಯ ನಾದಕ್ಕೆ ಸಮಾಜದ ಎಲ್ಲಾ ಸ್ತರಗಳ ಜನರೂ ತಮ್ಮ ದನಿಯನ್ನು ಸೇರಿಸಿದರು; ಉನ್ನತ ಆಧ್ಯಾತ್ಮಿಕ ಭಾವದಲ್ಲಿ ಮತ್ತರಾಗಿ ನರ್ತಿಸಿದರು.

ಗಿರೀಶನ ಕಾಲದಲ್ಲಿ, ಅಂದರೆ ೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಮೂರ್ತಿ ಪೂಜೆಯ ವಿರೋಧ, ಭಾರತೀಯವಾದುದೆಲ್ಲದರ ಬಗ್ಗೆ ತಿರಸ್ಕಾರ ಒಂದೆಡೆ ಇದ್ದರೆ, ಇನ್ನೊಂದೆಡೆ ಹಿಂದೂ ಧರ್ಮದ ಪ್ರಚಾರಕರಾದ ಪಂಡಿತ ಶಶಧರ ತರ್ಕಚೂಡಾಮಣಿ ಮುಂತಾದವರು ಧಾರ್ಮಿಕ ಆಂದೋಲನವೊಂದನ್ನು ಆರಂಭಿಸಿದ್ದರು. ಕೇಶವಚಂದ್ರ ಸೇನ್, ಪಂಡಿತ ಶಿವನಾಥ ಶಾಸ್ತ್ರಿ ಮೊದಲಾದ ಬ್ರಾಹ್ಮ ಪ್ರಚಾರಕರು ಹಾಗೂ ಬಂಕಿಮಚಂದ್ರರಂಥ ಸಾಹಿತಿಗಳು ತರುಣರ ಮನಸ್ಸಿನಲ್ಲಿ ಹೊಸದಾಗಿ ಧರ್ಮಭಾವನೆಯನ್ನು ತರುವ ಪ್ರಯತ್ನ ಮಾಡುತ್ತಿದ್ದರು.

ಇಂಥ ಒಂದು ಸಂದಿಗ್ಧ ಸಮಯದಲ್ಲಿಯೇ ಗಿರೀಶ್ ಘೋಷ್ **ಚೈತನ್ಯಲೀಲಾ** ನಾಟಕವನ್ನು ರಚಿಸಿ, ರಂಗಕ್ಕೆ ತಂದನು. ಆದರೆ ಯಾವುದೇ ಧಾರ್ಮಿಕ ಭಾವನೆಯನ್ನು ಪ್ರಚೋದಿಸುವುದು ಅವನ ಉದ್ದೇಶವಾಗಿರಲಿಲ್ಲ. ಈ ನಾಟಕವನ್ನು ಅತ್ಯಂತ ಕಡಮೆ ಖರ್ಚಿನಲ್ಲಿ ನಡೆಸಬಹುದಾಗಿತ್ತು. ಕೆಲವು ಕಾವಿ ಬಟ್ಟೆಗಳು, ರುದ್ರಾಕ್ಷಿ ಮಾಲೆಗಳು ಮಾತ್ರ ಇದಕ್ಕೆ ಬೇಕಾದ ಅಲಂಕಾರದ ಪರಿಕರಗಳು. ಆದರೆ ಹೊಸ ಹೊಸ ಭಾವ ಹಾಗೂ ವಸ್ತುಗಳಿಂದ ಕೂಡಿದ ನಾಟಕಗಳನ್ನು ರಂಗಮಂಟಪಕ್ಕೆ ತರಲು ಗಿರೀಶ್ ಒಂದೇ ಸಮನೆ ಒಂದಾದ ಮೇಲೆ ಒಂದರಂತೆ ನಾಟಕಗಳನ್ನು ರಚಿಸುತ್ತಿದ್ದನು. **ಚೈತನ್ಯಲೀಲಾ** ಕೂಡ ಇವುಗಳಲ್ಲಿ ಒಂದು. ಈ ನಾಟಕ ತನ್ನ ಜೀವನದಲ್ಲಿ ಒಂದು ಗುರುತರವಾದ ಬದಲಾವಣೆಯನ್ನು ತರುವುದು ಮಾತ್ರವಲ್ಲ, ಇಡಿಯ ನಾಟಕರಂಗವನ್ನೇ ಒಂದು ಗೌರವಯುತ ಸ್ಥಾನಕ್ಕೆ ಏರಿಸುತ್ತದೆಂಬ ಯಾವ ಸುಳಿವೂ ಆರಂಭದಲ್ಲಿ ಗಿರೀಶನಿಗೆ ಸಿಕ್ಕಿರಲಿಲ್ಲ. ನಾಟಕದ ಹಾಡುಗಳು ಹಾಗೂ ನೃತ್ಯದ ಮಾರ್ಗದರ್ಶನಕ್ಕೆ ಗಿರೀಶ್ ಆ ಕಾಲದ ಪ್ರಸಿದ್ಧ ಗಾಯಕ ವೇಣೀಮಾಧವ ಅಧಿಕಾರಿಯ ಸಹಾಯ ಪಡೆದಿದ್ದನು. ಈತ ನರೇಂದ್ರನಾಥನ (ಮುಂದೆ ಸ್ವಾಮಿ ವಿವೇಕಾನಂದ) ಸಂಗೀತ ಶಿಕ್ಷಕನಾಗಿದ್ದನು.

ಈ ನಾಟಕ, ಸಮಾಜದಲ್ಲಿ ತೀವ್ರ ನಿಂದೆಗೂ ಒಳಗಾಗಿತ್ತು. ಇದಕ್ಕೆ ಅಂದಿನ ಪ್ರಸಿದ್ಧ ನಾಟಕಕಾರ ಅಮೃತಲಾಲ ಬಸುವಿನ ಮಾತಿನಲ್ಲಿ ಹೇಳುವುದಾದರೆ, **"ವ್ಯಭಿಚಾರಿಗಳಾದ ನಟನಟಿಯರಿಂದ ಧರ್ಮಪ್ರಚಾರವೆ?!"** ಎಂಬ ಅಸಡ್ಡೆಯ ಭಾವವೇ ಕಾರಣವಾಗಿತ್ತು. **'ಇಂಗ್ಲಿಷ್‌ಮ್ಯಾನ್'** ನಂಥ ಪಾಶ್ಚಾತ್ಯ ಭಾವವುಳ್ಳ ಪತ್ರಿಕೆಯೂ, **"ಅಂಗಡಿ ಬೀದಿಯಲ್ಲಿ ಅಲೆಯುವ ನೀಚಸ್ತರದ ನಟಿಯರಿಂದ ಧರ್ಮಪ್ರಚಾರ ನಡೆಯುತ್ತಿದೆ"** ಎಂದು ಟೀಕೆ ಮಾಡಿತು. ಇಷ್ಟೆಲ್ಲಾ ಟೀಕೆ ಟಿಪ್ಪಣಿಗಳ ನಡುವೆಯೂ ಈ ನಾಟಕ ಅತ್ಯಂತ ಜನಪ್ರಿಯವಾಯಿತು.

ಸಾಧಕ ವಿಜಯಕೃಷ್ಣ ಗೋಸ್ವಾಮಿ ಈ ನಾಟಕದ 'ಕೇಶವ ಕುರು ಕರುಣಾ ದೀನೆ' ಎಂಬ ಹಾಡನ್ನು ಕೇಳಿ ತನ್ನ ಇರವನ್ನೇ ಮರೆತು ಸ್ಟಾರ್‌ಥಿಯೇಟರಿನಲ್ಲಿ ನರ್ತಿಸಲಾರಂಭಿಸಿದನು. ನವದ್ವೀಪದ ಹೆಸರುವಾಸಿಯಾದ ಪಂಡಿತ ವಿದ್ಯಾಭೂಷಣನು **ಚೈತನ್ಯಲೀಲಾ** ನಾಟಕದ ಆಮಂತ್ರಣಪತ್ರವನ್ನು ಪಡೆದನು. ನಟನಟಿಯರ ಸ್ವಭಾವಚಾರಿತ್ರ್ಯಗಳ ಬಗ್ಗೆ ಒಳ್ಳೆಯ ಭಾವನೆ ಇಲ್ಲದ್ದರಿಂದ ನಾಟಕಾಲಯದೊಳಗೆ ಪ್ರವೇಶಿಸುವ ವಿಚಾರ ಎಂದೂ ಆ ಪಂಡಿತನಿಗೆ ಉಂಟಾಗಿರಲಿಲ್ಲ. ಆದರೂ **ಚೈತನ್ಯಲೀಲಾ** ನಾಟಕದ ಕೀರ್ತಿಯನ್ನು ಕೇಳಿ, ಬಹುವಾಗಿ ಚಿಂತಿಸಿ, ಕಡೆಗೆ ತನ್ನ ಮಗ ಮಥುರನಾಥ ಪದರತ್ನನನ್ನು ಕಳುಹಿಸಿದನು. ಈತನೂ ತಂದೆಯಂತೆ ನಿಷ್ಠಾವಂತ ವೈಷ್ಣವ ಪಂಡಿತ. ನಟಿ ವಿನೋದಿನಿಯು ಚೈತನ್ಯದೇವನ ಪಾತ್ರದಲ್ಲಿ ಮಾಡಿದ ಅದ್ಭುತ ಅಭಿನಯವನ್ನು ಕಂಡು ಹಾಗೂ ಭಕ್ತಿ ಭಾವೋದ್ದೀಪಕ ಹಾಡುಗಳನ್ನು ಕೇಳಿ ಮುಗ್ಧನಾದ ಮಥುರನಾಥ ನಾಟಕ ಮುಗಿದ ಮೇಲೆ ಗಿರೀಶ್ ಘೋಷನ ಬಳಿ ಹೋಗಿ, ತನಗಿಂತ ಹಿರಿಯನಾದ ಆತನ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸಲು ಮುಂದಾದನು. ಗಿರೀಶ್ ಕೂಡಲೇ ಆತನನ್ನು ತಡೆಯಲು, ಆ ವೈಷ್ಣವ ಪಂಡಿತ ಹೃತ್ಪೂರ್ವಕವಾಗಿ ಗಿರೀಶನಿಗೆ ಹೀಗೆ ಹಾರೈಸಿದನು: **"ಜೀವನದಲ್ಲಿ ನೀವು ಬಯಸಿದ್ದನ್ನು ಚೈತನ್ಯದೇವ ಸಫಲವಾಗುವಂತೆ ಮಾಡುತ್ತಾನೆ."** (*ಮುಂದುವರಿಯುವುದು*)

---

## ಚಿಂತನಪ್ರಭ

### ಅಹಿಂಸೆಯ ವ್ಯಾಪ್ತಿ

ಹಿಂಸೆ ಮತ್ತು ಹೇಡಿತನ – ಇವೆರಡರ ಪೈಕಿ ನಾನು ಹಿಂಸೆಯನ್ನೇ ಒಪ್ಪುತ್ತೇನೆ... ಅಪಾಯದ ಮುಖದಿಂದ ಪರಾರಿಯಾಗುವುದು ಶುದ್ಧ ಹೇಡಿತನ... ಆದರೆ ಅಹಿಂಸೆ ಹಿಂಸೆಗಿಂತ ಸಾವಿರಪಾಲು ಮೇಲಾದುದು. ಕ್ಷಮಿಸುವುದು ಶಿಕ್ಷಿಸುವುದಕ್ಕಿಂತ ಉತ್ತಮವಾದುದು ಎಂದು ನನಗೆ ಗೊತ್ತು. ಶಿಕ್ಷಿಸಲು ಶಕ್ತಿಯಿರುವಾಗ ಮಾತ್ರ ಶಿಕ್ಷಿಸದಿರುವುದು ಕ್ಷಮೆ... ಶಕ್ತಿ, ಬರಿಯ ದೇಹದ ಪಶುಶಕ್ತಿಯಲ್ಲಿ ಮಾತ್ರ ಇಲ್ಲ. ಬಗ್ಗಿಸಲು ಅಸಾಧ್ಯವಾದ ಮನಸ್ಥೈರ್ಯ, ಇಚ್ಛಾಶಕ್ತಿ – ಇವೇ ನಿಜವಾದ ಶಕ್ತಿ. ಆತ್ಮದ ಪೂರ್ಣಬಲದಿಂದ ದುಷ್ಟರ ಹಿಂಸೆಯನ್ನು ಎದುರಿಸುವುದೇ ಅಹಿಂಸೆ. ಒಬ್ಬನೇ ಒಬ್ಬ ಮನುಷ್ಯ, ಹೀಗೆ ಒಂದು ಚಕ್ರಾಧಿಪತ್ಯವನ್ನು ಎದುರಿಸಿ, ಅದನ್ನು ನಾಶಮಾಡಬಲ್ಲನು. ಈ ಅಹಿಂಸೆ ಬರಿಯ ಋಷಿಗಳಿಗೆ ಮಾತ್ರ ಸೇರಿದುದಲ್ಲ. ಇದನ್ನು ಸಾಮಾನ್ಯರೂ ಆಚರಿಸಬಹುದು. ಅಹಿಂಸೆ ಮನುಷ್ಯನ ಗುಣ. ಹಿಂಸೆ ಪಶುಗಳ ಲಕ್ಷಣ. ಪಶುಗಳ ಆತ್ಮ ನಿದ್ರಿಸುತ್ತಿದೆ. ಅದಕ್ಕೆ ದೇಹಶಕ್ತಿ ಹೊರತು ಮತ್ತಾವುದೂ ತಿಳಿದಿಲ್ಲ. ಆದರೆ ಮನುಷ್ಯನ ಘನತೆ, ಇದಕ್ಕಿಂತ ಮೇಲಿನ ಆತ್ಮದ ಶಕ್ತಿಗೆ ಅಧೀನವಾಗಿರುತ್ತದೆ. ಇದಕ್ಕೆ ಮುಖ್ಯವಾದುದು ತ್ಯಾಗ; ಆತ್ಮದ ಬಲಿದಾನ. ಅಹಿಂಸೆಯನ್ನು ಕಂಡುಹಿಡಿದ ಋಷಿಗಳು ವಿಜ್ಞಾನಿಗಳಿಗಿಂತ ದೊಡ್ಡವರಾಗಿದ್ದರು. ಅವರು ಜಗತ್ತಿಗೆ, "ಹಿಂಸೆಯಿಂದ ಮೋಕ್ಷವಿಲ್ಲ, ಅಹಿಂಸೆಯಿಂದ ಮಾತ್ರ ಮೋಕ್ಷ" ಎಂದು ಬೋಧಿಸಿದರು. ಅಂತಹ ಶಕ್ತಿಯ ಸಂರಕ್ಷಣೆಯಲ್ಲಿ ಮಾತ್ರ ನಾವು ಸುಖವಾಗಿ, ಸುವ್ಯವಸ್ಥಿತವಾಗಿ ಜೀವಿಸಬಹುದು.

**–ಮಹಾತ್ಮ ಗಾಂಧೀ** (ಆಧಾರ: ಭಾರತ ಭಾಗ್ಯವಿಧಾತ)